KACM030026512022

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.ಸಂಖ್ಯೆ 1706/2022

ದಿನಾಂಕಃ 14/09/2023

| | |
|---|---|
| ಫಿರ್ಯಾದುದಾರರುಃ | ತೀರ್ಥಕುಮಾರ್ ಕೆ.ಕೆ. ಬಿನ್ ಕುಬೇರಸ್ವಾಮಿ ಕೆ.ಆರ್. 44 ವರ್ಷಗಳು, ವಾಸಃ ರಾಜೇಶ್ವರಿ ನಿಲಯ, ರಾಮನಹಳ್ಳಿ ಮುಖ್ಯ ರಸ್ತೆ, ಚಿಕ್ಕಮಗಳೂರು. |

- ವಿರುದ್ಧ -

| | |
|---|---|
| ಆರೋಪಿಃ | ಲಕ್ಷ್ಮೀಶಾಚಾರ್ ಎಲ್.ಪಿ. ಬಿನ್ ಪುಟ್ಟಸ್ವಾಮಾಚಾರ್, 45 ವರ್ಷಗಳು, ವಾಸಃ ಕೊನೆಯ ತಿರುವು, ಹೌಸಿಂಗ್ ಬೋರ್ಡ್, ಆಟೋ ಸರ್ಕಲ್ ಡೌನ್ ರಸ್ತೆ, ಚಿಕ್ಕಮಗಳೂರು. |

ದಂ.ಪ್ರ.ಸಂ ಕಲಂ 251 ರ ಪ್ರಕಾರ ಆರೋಪಣೆ

ಆರೋಪಿಯಾದ ನೀವು ಫಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು ಪಾವತಿಗಾಗಿ ಕಾರ್ಪೋರೇಷನ್ ಬ್ಯಾಂಕ್, ಚಿಕ್ಕಮಗಳೂರು ಶಾಖೆ, ಚಿಕ್ಕಮಗಳೂರು ಇದರ ಚೆಕ್ ನಂಬರ್ 858931 ರ ದಿನಾಂಕ 25.05.2022 ರ ಚೆಕ್ಕನ್ನು ರೂ.1,00,000/ (ಒಂದು ಲಕ್ಷ ರೂಪಾಯಿ) ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದುಗೊಳಿಸಲು ಸ್ಟೇಟ್ ಬ್ಯಾಂಕ್ ಇಂಡಿಯಾ, ಚಿಕ್ಕಮಗಳೂರು ಶಾಖೆ, ಚಿಕ್ಕಮಗಳೂರು ಇಲ್ಲಿಗೆ ಹಾಜರುಪಡಿಸಿದಾಗ ಸದರಿ ಚೆಕ್ಕು **"88-BANKCDEXCWEF"** ಎಂಬ ಕಾರಣಕ್ಕಾಗಿ ಅನಾದರಣಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸ್ ದಿನಾಂಕ 10/06/2022 ರಂದು ನೀಡಿ ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ ನೀವು

ಫಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

ಪ್ರ:1 ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೆ ?

ಉಃ ಅರ್ಥವಾಯಿತು

ಪ್ರ:2 ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?

ಉಃ ವಿಚಾರಣೆಯಾಗಬೇಕು

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

-ಸಹಿ -
(ಹರೀಶ್ ಜಿ)
ಸಿ/ಸಿ 2 ನೇ ಹೆಚ್ಚುವರಿ ಪ್ರದನ್ಯಾದಂ.,
ಚಿಕ್ಕಮಗಳೂರು.

ಆರೋಪಿ ಸಹಿ.